


ಬಂದಂತಿದ್ದವಳು ಮುಖ ತೋರಲಾಗದೇ ತೆವಳುತ್ತಾ ಬೇಲಿ ಮರೆಯ ತಡಿಕೆಯಲ್ಲಿ ತೂರಿ ಹೋಗಿ ಅವಿತಳು. ಇನ್ನಿಬ್ಬರು ಅತ್ತೆಯರು ಬಾಗಿಲು ಮುಚ್ಚಿಕೊಂಡ್ಡಿದ್ದರು. ಅವರಿಗೆ ಏಡ್ಸ್ ರೋಗ ಬಡಿದಿತ್ತು. ಸಾವಿನ ದವಡೆಯಲ್ಲಿ ಸಿಲುಕಿದ್ದರು. ಅವರ ಪಾಲಿಗೆ ಯಾರೂ ಇರಲಿಲ್ಲ. ಸತ್ತರೆ ಎತ್ತಿ ಬಿಸಾಡುವ ಎಂದು ವಯಸ್ಸಾದ ಹೆಂಗಸರು ಕರುಣೆ ತೋರಿದ್ದರು. ಅವಳು ನೋಡಲಾರದೇ ಪ್ರಸಾದವ ಬಾಗಿಲ ಬಳಿ ಇಟ್ಟು ಹೆದರಿ ಇತ್ತ ಬಂದುಬಿಟ್ಟಿದ್ದಳು. ಅವಳ ಕಂಕುಳಲ್ಲಿದ್ದ ಮಗು ಅಳುತ್ತಿತ್ತು. ಛೀ; ಇದು ಎಂತಹ ನರಕವಪ್ಪಾ ಎಂದು ಹಿಂತಿರುಗಿ ಗಂಡನಿಗೆ ನಡೆದಿದ್ದೆಲ್ಲವನ್ನು ಹೇಳಿದಳು. ಅತ್ತೆಯರ ಒಂದು ಫೋಟೊವನ್ನು ಕೂಡ ತೆಗೆಯಲು ಆಗಿರಲಿಲ್ಲ. ಯಾರೋ ಅಲ್ಲಿ ಊರ ಮುಂದಿದ್ದ ಮಾರಿಗುಡಿಯ ಅರಳಿ ಮರದ ಕೆಳಗೆ ಕೂತಿದ್ದ ಹುಚ್ಚಿಯತ್ತ ತೋರಿ; ಅವಳೇ ನಿನ್ನ ಗಂಡನ ತಾಯಿ ಎಂದಿದ್ದರು. ಲೋಕ ಹೀಗೂ ಇರುತ್ತಾ ಎಂದು ಆಕೆ ತತ್ತರಿಸಿ; ಎಂತಾ ನಿನ್ನ ಊರೋ... ಸಂಬಂಧಿಕರೋ... ದೇವರ ಮುಡಿಯೋ ಎಂದು ಸಿಡುಕಾಡಿದ್ದಳು. ಹೀಗೆಲ್ಲ ಆಗಿರುತ್ತದೆ ಎಂಬುದೇ ಅವನಿಗೆ ಗೊತ್ತಿರಲಿಲ್ಲ. ತನ್ನ ತಾಯಿಯನ್ನು ಕಾಪಾಡಲಾಗದೆ ಕಂಗೆಟ್ಟಿದ್ದ. ಎಷ್ಟೆಲ್ಲ ಪ್ರಯತ್ನಿಸಿದ್ದರೂ ಅವಳು ಹಿಡಿತಕ್ಕೆ ಸಿಕ್ಕಿರಲಿಲ್ಲ. ಅಂತಹ ಆ ಹುಚ್ಚಿ ತಾಯಿ... ಆ ವಿಕೃತ ಅಪ್ಪ... ಆ ನರಭಕ್ಷಕ ಕಾಮುಕರ ಮೆರೆದಾಟ... ಆ ನಿಷ್ಪಾಪಿ ಅತ್ತೆಯರ ಕೊನೆಯ ಕ್ಷಣಗಳ ನೆನೆದು ಆತ ಗಳಗಳ ಅತ್ತುಬಿಟ್ಟ. ಕಾಳ ರಾತ್ರಿ ಇರಿಯುತ್ತಿತ್ತು. ಆಕಾಶದ ನಕ್ಷತ್ರಗಳು ನಗುತ್ತಿದ್ದವು. ಆ ಅತ್ತೆಯರ ನಗುವು ಅಲೆ ಅಲೆಯಾಗಿ ತೇಲಿ ಬರುತ್ತಲೇ ಇತ್ತು. ಅವನ ಸಂಕಟ ಯಾವುದೋ ಕಥೆಯ ತೊಟ್ಟಿಲು ಕಟ್ಟುತ್ತಿತ್ತು. ಅತ್ತೆಯರ ಆ ನಗು ನಿಲ್ಲುತ್ತಲೇ ಇರಲಿಲ್ಲ.

●